ದುರ್ಗವ್ವ ನಿನಗೆ ಇವಾಗ ಕಣ್ಣು ತೆರಿಸವ್ವಳೇ' ಎಂದು ಹೇಳುತ್ತಿದ್ದರು.

ಒಂದು ದಿನಾಂಬೊದು, ಒಂದು ತಿಂಗಳಾಗಿ ವರ್ಷಗಳಾಗಿ ಉರುಳಿದವು. ಕೊನೆಗೂ ಗೌಡ್ರ ಸಾಲ ಇನ್ನೇನೂ ಚುಕ್ತಾ ಅಯ್ತು ಅನ್ನೋದ್ರಾಗೆ, ಮತ್ತೇ ದುರ್ಗವ್ವನ ಜಾತ್ರೆ ಎಂದು ಸಾರಾಣೆ ಬಡಿದುಬಿಟ್ರು. ಇತ್ತ ಸಂಕವ್ವ ತನ್ನ ಹರಕೆ ನೆನಪಾಗಿ ಗಂಡನಿಗೆ ಅಳ್ತಾ ಹೇಳಿದ್ಲು. ಅದನ್ನು ಕೇಳಿದ ಕರಿಯ 'ಆಯ್ಯೋ ಪೆದ್ದ ಮುಂಡೆದೇ ನಾನು ಚರಗದ ಬುಟ್ಟಿ ಹೊರುತ್ತೀನಿ. ಆ ದುರ್ಗವ್ವ ನಮ್ಮನ್ನ ಕಾಪಾಡತ್ತಾಳೆ ಬಿಡು' ಎಂದು ಧೈರ್ಯದಿಂದ ಹೇಳಿದ. ಇದುವರೆಗೆ ಆ ಚರಗ ಬುಟ್ಟಿ ಹೊತ್ತೋರು ಬದುಕಿದ್ದು ಗೊತ್ತೇಯಿಲ್ಲಾ ಎಂಬ ಕತಿ ಕೇಳಿದ ಸಂಕವ್ವನಿಗೆ ಈಗೀಗಾ ಗಂಡಂಬೋನು ದಾರಿ ಹಿಡದ್ವನೆಂದು ಕರಿಯನ ಮೇಲಿನ ಜೀವ ತುಂಬಿಕೊಂಡ್ಲು.

ಆದರೆ ಆ ಚರಗದ ಬುಟ್ಟಿ ಹೊರುವ ಕೆಲಸ ಈ ದಲಿತರ ಕೇರಿಯವರದೇ. ಗೌಡ್ರು ಗೊಂಚಿಕಾರರದು ಏನಿದ್ದರೂ ದುರ್ಗವ್ವನಿಗೆ ಪೂಜೆ ಮಾಡೋದು, ಮೊದಲನೇ ಬೇಟೆ ಕಡಿಯುವುದು ಅಗಿತ್ತು. ಅಂತೂ ಇಂತು ಚರಗದ ಬುಟ್ಟಿಯನ್ನು ಭೀಮಪ್ಪನ ಮನೆತನದವರೇ ಪರಂಪರೆಯಿಂದಲೂ ನಡೆಸಿಕೊಂಡು ಬರುತ್ತಿದ್ದರಿಂದ, ಈ ವರ್ಷನೂ ಈ ಮನೆತನದವರೇ ಚರಗ ಚೆಲ್ಲಬೇಕೆಂದು ಊರಿನ ಹಿರಿಯರು ನಿಶ್ಚಯಿಸಿದರು. ಭೀಮಪ್ಪನ ಹಿರಿಯ ಮಗ ನಾಗನನ್ನು ಕೇಳಿದ್ರು, ಅವನು ಇದಕ್ಕೆ ಒಪ್ಪಲಿಲ್ಲಾ. ಕೊನೆಯ ಮಗ ಕರಿಯನೇ ಹೊರಬೇಕೆಂದು ಹಿರಿಯರು ನಿಶ್ಚಯ ಮಾಡಿದ್ರು, ಕಾಕತಾಳೀಯ ಎಂಬಂತೆ ಇತ್ತ ಸಂಕವ್ವನು 'ನಮ್ಗೆ ಚರಗ ಚೆಲ್ಲೊ ಭಾಗ್ಯ ಬರ್ಲಿ' ಅಂತ ದುರ್ಗವ್ವನಲ್ಲಿ ಬೇಡಿಕೊಂಡಂತೆ, ಭೀಮಪ್ಪನ ಆಸೆಯ ಮಗನಾದ ಕರಿಯ ತನ್ನ ತಂದೆಯ ಆಸೆಯನ್ನು ನೆರವೇರಿಸುವ ಭಾಗ್ಯ ಒಂದು ಕಡೆಯಾದರೆ, ಅವನ ಹೆನ್ತಿ ಕಟ್ಟಿಕೊಂಡ ಹರಕೆಯನ್ನು ತೀರಿಸುವ ಸಲುವಾಗಿ ಪಾಲಿಗೆ ಬಂದ ಸೌಭಾಗ್ಯ ಎಂದು ತಿಳಿದು, ಮರು ಮಾತನಾಡದೆ ಒಪ್ಪಿಕೊಂಡನು.

ಇತ್ತ ತಾನು ಮದುವೆಯಾಗಿ ಬಂದ ಕಾಲಕ್ಕೆ, ಈ ಜಾತ್ರಿಲಿ ತನ್ನ ಮಾವನನ್ನು ಕಳೆದುಕೊಂಡ ನೆನಪನ್ನು ಮಾಡಿಕೊಂಡ ಸಂಕವ್ವ, 'ನನ್ನ ಗಂಡನನ್ನು ಕಾಪಾಡು ತಾಯೆಂಬ್ತಾ' ಕಂಡ ಕಂಡ ದೇವರಿಗೂ ಬೇಡಿಕೊಂಡ್ಲು. ದಿನಾ ಬೆಳಿಗ್ಗೆ ಅಗುವ ಹೊತ್ತಿಗೆ ಮನೆಯನ್ನು ಸಾರಣೆ ಮಾಡಿ, ಗಂಡ ಹೆಂಡತಿ ಇಬ್ರು ದುರ್ಗವ್ವನನ್ನು ಪೂಜೆ ಮಾಡುತ್ತಿದ್ರು. ಊರಿಗೆ ಊರೆ ಸಾಲಶೂಲ ಮಾಡಿ ಕಟ್‌ಮಸ್ತಾದ ಬೇಟೆಗಳನ್ನು ಮನಿಯಂಗಳದಲ್ಲಿ ಕಟ್ಟದ್ನ ನೋಡಿ ಸಂಕವ್ವನು ಜಾತ್ರಿಗೆಂದು ಬೇಟೆಯನ್ನು ತಂದು ಮನೆಯ ಮುಂದೆ ಕಟ್ಟಿಕೊಂಡ್ಲು, ಅದನ್ನು ದಿನಾಲು ಗೌಡ್ರ ಹೊಲದಲ್ಲಿ ಕೆಲಸಕ್ಕೆ ಹೋಗುವಾಗ ಮೇಯಿಸಲು ಜೊತೆಯಲ್ಲಿನೆ ಕರೆದುಕೊಂಡು ಹೋಗುತ್ತಿದ್ದಳು. ಅವಳು ತನ್ನ ತವರುಮನೆಯಲ್ಲಿನ ಮಾಂಸವೆಂದ್ರೆ ಗುಟುಕು ನೀರು ಕುಡಿತ ಕುಂತಿದ್ನ ಅಪ್ಪನನ್ನು ಹಬ್ಬಕ್ಕೆ ಕರೆದು, ಬೇಟೆಯ ಸಾರು ಉಣಿಸಿ ಕಳಿಸುವ ಆಸೆಯಿಂದ ಅದನ್ನು ಸಾಕಿದ್ಲು. ಆ ಬೇಟೆಯ ಮೇಲೆ ಗೌಡ್ರು ಕಣ್ಣು ಬಿದ್ದಿತ್ತು. ಹೇಗಾದರೂ ಮಾಡಿ ಸಂಕವ್ವನ ಬೇಟೆ ಕಟ್‌ಮಸ್ತಾಗಿದೆ. ತಿಂದರೆ ಇಂತಹ ಬೇಟೆಯನ್ನೇ ತಿನ್ನಬೇಕೆಂದುಕೊಂಡು ಸಂಕವ್ವನನ್ನು ಕೇಳಿದ್ದು ಉಂಟು, ಅದಕ್ಕೆ ಸಂಕವ್ವ ನಿರಾಕರಿಸಿದ್ದು ಉಂಟು. ವ್ಯಾಪಾರದವರು ಹತ್ತು ಸಾವಿರ ಪಗಾರಕ್ಕೆ ಕೇಳಿದ್ದುಂಟು.

ಪಟ್ಟಣದ ಮೌಲಾನ ಸಾಬ್ ಕೂಡ 'ಹದಿನೈದು ಸಾವಿರ ನಿಂತ ಜಾಗದಾಗೆ ಕಟ್ಟಿ ಹೋಗುತ್ತಿನಿ ಕೊಡೆಯವ್ವ' ಎಂದು ಅಂದಿದ್ದುಂಟು. ಅದರೆ ಅವರೆಲ್ಲರಿಂದ ತಪ್ಪಿಸಿಕೊಳ್ಳಲು, ಸಂಕವ್ವನ ಜಾಣ್ಮೆ 'ಅದು ದುರ್ಗವ್ವನಿಗೆ ಹರಕೆಗೆ ಬಿಟ್ಟ

